

## ನಗೆ ಹೂವು ಬಾಡದಿರಲಿ...

ಮುದ್ದು ಮಕ್ಕಳ ಭವಿಷ್ಯದ ಕರಾಳ ಮುಖದ ಹಲವು ಆಯಾಮಗಳನ್ನೋದಿ (ಮೇ 27) ದಿಗಿಲಾಯಿತು. ಸಂಬಂಧಪಟ್ಟ ಅಧಿಕಾರಿಗಳ ಸದಭಿಪ್ರಾಯಗಳನ್ನು ಪಡೆದು, ಸ್ವತಃ ಸಿ.ಆರ್.ಟಿ.ಯ ಕಾರ್ಯಕಾರಿ ನಿರ್ದೇಶಕರಾಗಿರುವ ಎನ್.ವಿ. ವಾಸುದೇವ ಶರ್ಮಾ ಅವರು ಸಮಸ್ಯೆಯ ಆಳಕ್ಕಿಳಿದು ವಿಶ್ಲೇಷಿಸಿದ್ದಾರೆ. ಸಂಕುಚಿತತೆ, ಸ್ವಾರ್ಥಗಳನ್ನು ಬದಿಗೊತ್ತಿ ಕೇವಲ ಅಂತಃಕರಣ ಮತ್ತು ಮಾನವೀಯ ಮೌಲ್ಯಗಳನ್ನೇ ಮೂಲವಾಗಿಟ್ಟುಕೊಂಡು ಜನಸಮುದಾಯ ಕಾರ್ಯೋನ್ಮುಖವಾದಲ್ಲಿ ಸಮಸ್ಯೆಯ ಭೀಕರತೆಯನ್ನು ಸ್ವಲ್ಪ ತಗ್ಗಿಸಬಹುದೇನೊ?

—ವೀರಭದ್ರ ರಟ್ಟಿಹಳ್ಳಿ, ಹುಬ್ಬಳ್ಳಿ

ಲೇಖನ ಸಮಯೋಚಿತವಾಗಿದೆ. ಕೊರೊನಾ ವೈರಸ್, ಮುದ್ದು ಮಕ್ಕಳ ಮೇಲೆ ಭೀಕರ ಪರಿಣಾಮ ಬೀರಿದೆ. ತಂದೆ ತಾಯಿಯರನ್ನು ಕಳೆದುಕೊಂಡ ಮಕ್ಕಳು ದುರ್ಜನರ ಕೈಗೆ ಸಿಗದಂತೆ ನೋಡಿಕೊಳ್ಳುವುದು ದೇಶದ ನಾಗರಿಕರ ಕರ್ತವ್ಯ.

—ಬಾಣಾವರ ನಾಗರಾಜ, ಬೆಂಗಳೂರು

## ಲಸಿಕೆ: ತಪ್ಪು ಕಲ್ಪನೆಗಳು

ಡಾ. ಎಚ್.ಎಸ್. ಮೋಹನ್ ಅವರ ‘ಕೋವಿಡ್ ಲಸಿಕೆ: ತಪ್ಪು ಕಲ್ಪನೆಗಳು’ (ಮೇ 27) ಲೇಖನ ನನ್ನ ಎಷ್ಟೋ ಗೊಂದಲಗಳನ್ನು ನಿವಾರಿಸಿತು. ಒಂದೊಂದು ಪತ್ರಿಕೆಗಳಲ್ಲಿ, ವಾಟ್ಸ್ಆ್ಯಪ್ ಫೇಸ್‌ಬುಕ್‌ನಲ್ಲಿ ಬಂದ ಒಂದಕ್ಕೊಂದು ಸಂಬಂಧವಿಲ್ಲದಂತೆ ಕಾಣುವ ತುಣುಕು ಮಾಹಿತಿಗಳಿಂದ ಗೊಂದಲಕ್ಕೊಳಗಾಗಿದ್ದೆ. ಇದೀಗ ಸಮಾಧಾನವಾಯಿತು.

—ಪಿ. ವಾಸುದೇವ್ ಭಟ್, ಉಡುಪಿ

## ದತ್ತಕದ ಸೂತ್ರ

ಸಾಮಾಜಿಕ ಜಾಲತಾಣಗಳಲ್ಲಿ ಕೊರೊನಾ ಕೊಳ್ಳಿಗೆ ಸಿಲುಕಿ ಅನಾಥರಾದ ಮಕ್ಕಳ ದತ್ತು ಪಡೆಯುವ ಅರೆಬರೆ ಮಾಹಿತಿಗಳು ದಿಕ್ಕು ತಪ್ಪಿಸುತ್ತಿವೆ. ಸರಿಯಾದ ಸಮಯದಲ್ಲಿ ಸೌಮ್ಯಾ ಭಟ್ ಅವರ (ಮೇ 27) ‘ದತ್ತಕದ ಸೂತ್ರ’ ಲೇಖನ ಉಪಯುಕ್ತ ಮಾಹಿತಿ, ಕಾನೂನಾತ್ಮಕ ತಿಳಿವಳಿಕೆ ನೀಡಿತು.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

## ಕಾಮನಬಿಲ್ಲು



ಬಿ.ಎಲ್. ವೇಣು ಅವರ ಕಥೆ 'ಕಾಮನಬಿಲ್ಲು’ (ಮೇ 27) ಬಹಳ ಇಷ್ಟವಾಯಿತು. ಈ ಕಥೆಯಲ್ಲಿ ವೇಣು ಅವರು ಹೊಸ ಹೊಸ ಶಬ್ದಗಳನ್ನು ಪ್ರಯೋಗಿಸಿದ್ದಾರೆ. ಇದರಿಂದ ಕಥೆ ಮತ್ತಷ್ಟು ರಂಗೇರುತ್ತದೆ.

—ಗಿರೀಶ, ಸೊಲ್ಲಾಪುರ

ಎಂದಿನಂತೆ ಅವರ ಕಥನಶೈಲಿ ಸೃಜನಶೀಲತೆಯಿಂದ ಕೂಡಿದೆ. ಇಂತಹ ಕಥೆಗಳನ್ನು ವೇಣು ಮಾತ್ರ ಬರೆಯಬಲ್ಲರು.

—ಎನ್.ಎಸ್. ಮಹಂತೇಶ, ಚಿತ್ರದುರ್ಗ

## ಸಿಂಫೊನಿ ಆಫ್ ದ ಸೀಸ್

ಡಾ. ಪ್ರೇಮಲತ ಬಿ. ಅವರ ‘ಸಿಂಫೊನಿ ಆಫ್ ದ ಸೀಸ್’ (ಮೇ 27) ಲೇಖನ ‘ಅಬ್ಬಾ’ ಎನ್ನುವಂತಿತ್ತು. ಆ ಹಡಗಿನಲ್ಲಿ ಕೆಲಸ ನಿರ್ವಹಿಸುವವರ ಸಂಖ್ಯೆ, ಅವರ ಕರ್ತವ್ಯಗಳು, ಅದರೊಳಗಿನ ಐಷಾರಾಮ ಇವೆಲ್ಲದರ ಬಗ್ಗೆ ಲೇಖಕರು ಸವಿಸ್ತಾರವಾಗಿ ತಿಳಿಸಿದ್ದಾರೆ. ಅಷ್ಟೆಲ್ಲಾ ವೈಭೋಗ ಹೊಂದಿರುವ ಆ ಕಡಲ ನೌಕೆಯ ಅನುಭವ ಸ್ವರ್ಗದಲ್ಲಿ ತೇಲಾಡುವಂತಿರಬಹುದೇನೋ?

—ವೀಣಾ ಮಂಜಪ್ಪ, ಬೆಂಗಳೂರು

ಲೇಖನ ತುಂಬಾ ಚೆನ್ನಾಗಿತ್ತು. ಇನ್ನೂ ಎರಡು ಪುಟ ಹೆಚ್ಚಿಸಿ ಮತ್ತಷ್ಟು ಚಿತ್ರಗಳು ಇದ್ದಿದ್ದರೆ ಇನ್ನೂ ಅದ್ಭುತವಾಗಿರುತ್ತಿತ್ತು.

—ಬಿ. ರಾಜ್ ಕುಮಾರ್

‘ಸಿಂಪೋನಿ ಆಫ್ ದ ಸೀಸ್’ ಲೇಖನ ಚೆನ್ನಾಗಿ ಮೂಡಿಬಂದಿದೆ. ಹಾಗೆ ವರ್ಲ್ಡ್ ವಾರ್ 1 ಹಾಗೂ ವರ್ಲ್ಡ್ ವಾರ್ 2 ಬಗ್ಗೆ ವಿವರವಾಗಿ ತಿಳಿಯುವ ಬಗ್ಗೆ ಪೂರ್ತಿ ಸಂಚಿಕೆಯನ್ನು ರೂಪಿಸಿ.

—ಬಾಲಸುಬ್ರಹ್ಮಣ್ಯ

ಸುಲಭವಾಗಿ ಸಿಗುವ ಅನಾಥ ಮಕ್ಕಳನ್ನು ಕಾನೂನುಬಾಹಿರವಾಗಿ ದತ್ತು ತೆಗೆದುಕೊಳ್ಳುವ ನೆಪದಲ್ಲಿ ಅಮಾನವೀಯವಾಗಿ ದುಡಿಸಿಕೊಳ್ಳುವ, ವೇಶ್ಯಾಕೂಪಕ್ಕೆ ತಳ್ಳುವ, ಅಪರಾಧಿ ಚಟುವಟಿಕೆಗಳಲ್ಲಿ ಬಳಸಿಕೊಳ್ಳುವವರಿಗೆ ಈ ಲೇಖನ ಎಚ್ಚರಿಕೆಯ ಗಂಟೆಯಂತಿದೆ. ನ್ಯಾಯಸಮ್ಮತ ದತ್ತು ತೆಗೆದುಕೊಳ್ಳುವವರಿಗೆ ಮಾರ್ಗದರ್ಶಿಯಾಗಿದೆ.

—ಬಿ. ಗೋಪಾಲ್ ಸಿಂಗ್, ಮೈಸೂರು

## ಅಂತರಿಕ್ಷ ಕಸದ ಹೊಸ ಅಧ್ಯಾಯ

ಡಾ. ಗುರುಪ್ರಸಾದ್ ಅವರ ‘ಅಂತರಿಕ್ಷ ಕಸದ ಹೊಸ ಅಧ್ಯಾಯ’ (ಮೇ 27) ಲೇಖನ ಮಾಹಿತಿಪೂರ್ಣವಾಗಿದೆ. ಅಂತರಿಕ್ಷದಲ್ಲಿ ಮನುಷ್ಯನ ಅತಿಯಾದ ಹಸ್ತಕ್ಷೇಪದಿಂದ ಅದು ಕಲುಷಿತವಾಗುತ್ತಿದೆ. ನಾವು ನಿಸರ್ಗಕ್ಕೆ ಏನನ್ನು ಮಾಡುತ್ತೇವೆಯೋ ಅದೇ ನಮಗೆ ತಿರುಗಿ ಬರುತ್ತದೆ.

—ಭೋಜರಾಜ

ಗುರುಪ್ರಸಾದ್ ಅವರ ಲೇಖನ ಓದಿ, ಭಾರತಮೂಲದ ಅಮೆರಿಕನ್ ಗಗನಯಾತ್ರಿ ಕಲ್ಪನಾ ಚಾವ್ಲಾ ನೆನಪಾದಳು. ಇಂದಿನ ನಮ್ಮ ತಂತ್ರಜ್ಞಾನ ಮತ್ತು ಅಂತರಿಕ್ಷದ ಮೇಲೆ ಹಿಡಿತ ಸಾಧಿಸುವ ಪ್ರಯತ್ನದಿಂದಲೇ ಅಂತರಿಕ್ಷ ಕಲುಷಿತ ಆಗುತ್ತಿದೆ.

—ಎಂ.ಎಸ್. ಬಿದರಿಮಠ

## ಅವ್ಯವಸ್ಥೆಗೆ ಕನ್ನಡಿ

‘ನಿಮ್ಮೊಡನೆ’ ಪುಟದಲ್ಲಿ ಎನ್. ಉದಯಕುಮಾರ್ ಅವರ ‘ವ್ಯವಸ್ಥೆಯೇ ಅವ್ಯವಸ್ಥೆಯಾದಾಗ’ ಲೇಖನ (ಮೇ 27) ಪ್ರಸ್ತುತ ಪರಿಸ್ಥಿತಿಗೆ ಕನ್ನಡಿ ಹಿಡಿದಿದೆ. ವಿಷಮ ಪರಿಸ್ಥಿತಿಯಲ್ಲಿ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದ ತುರ್ತು ಎಂದಿಗಿಂತಲೂ ಇಂದು ಹೆಚ್ಚಾಗಿದೆ. ಆರೋಗ್ಯದ ಬಗೆಗಿನ ಸಣ್ಣ ನಿರ್ಲಕ್ಷ್ಯವೂ ನಮ್ಮನ್ನು ಬಲಿತೆಗೆದುಕೊಳ್ಳಲಿದೆ.

—ಎಂ.ಜಿ. ರಾಮಚಂದ್ರ, ಮಂಡಗಳಲೆ

## ಸೂರ್ಯ ವಿಜ್ಞಾನ

‘ವಿಚಾರ ಲಹರಿ’ಯಲ್ಲಿನ ಪುರಂಜೀವಿ ವರ ‘ಸೂರ್ಯ ವಿಜ್ಞಾನ’ ಲೇಖನ (ಮೇ 20) ಸಮಯೋಚಿತವಾಗಿದೆ. ಲೇಖನದ ಕೊನೆಯ ಸಾಲುಗಳು ಅರ್ಥಗರ್ಭಿತವಾಗಿವೆ: ‘ಸೂರ್ಯ ನಮ್ಮನ್ನು ಎಚ್ಚರಿಸುತ್ತಿದ್ದರೂ ನಾವು ಕೇಳಿಸಿಕೊಳ್ಳದ ಕಿವುಡರಾಗಿದ್ದೇವೆ’.

—ಕಿರಣ್ ಕುಮಾರ್ ಯು.ಸಿ., ಶಿವಮೊಗ್ಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in